**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–03)**

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟ್ಯಾಂಪು (ಎರಡನೇ ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಅನುಸೂಚಿಯ ತಿದ್ದುಪಡಿ.-** ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಅನುಸೂಚಿಯಲ್ಲಿನ 20ನೇ ಅನುಚ್ಛೇಧದ (4)ನೇ ಖಂಡದಲ್ಲಿ,-

(i) (i)ನೇ ಉಪಖಂಡದ (3)ನೇ ಕಾಲಂನಲ್ಲಿ "ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು" ಎಂಬ ಪದಗಳ ತರುವಾಯ ",ಗರಿಷ್ಠ ಇಪ್ಪತ್ತೈದು ಕೋಟಿ ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii)ನೇ ಉಪಖಂಡದ (3)ನೇ ಕಾಲಂನಲ್ಲಿ ವಿವರಣೆಗೂ ಮೊದಲಿರುವ "ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು" ಎಂಬ ಪದಗಳ ತರುವಾಯ ",ಗರಿಷ್ಠ ಇಪ್ಪತ್ತೈದು ಕೋಟಿ ರೂಪಾಯಿಗಳಿಗೆ ಒಳಪಟ್ಟು" ಎಂಬ ಪದಗಳನ್ನು ಸೇರಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಮಾತೃ ಕಂಪನಿಯೊಂದಿಗೆ ಪೂರಕ ಕಂಪನಿಗಳ ವಿಲೀನತೆ ಸೇರಿದಂತೆ ಕಂಪನಿಗಳ ವಿಲೀನ, ಅಂಥ ಕಂಪನಿಗೆ ಪರಿಹಾರವನ್ನು ಒದಗಿಸುವ ಸಲುವಾಗಿ ಕಂಪನಿಯ ಪುನರ್ ರಚನೆ ಅಥವಾ ವಿಭಜನೆಯ ಸಂಬಂಧದಲ್ಲಿ ಕಂಪನಿಗಳ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 18)ರ ಅಡಿಯಲ್ಲಿ ಉಚ್ಚನ್ಯಾಯಾಲಯವು ಅಥವಾ ಯುಕ್ತ ನ್ಯಾಯಾಧಿಕಾರಣಗಳು ಅಥವಾ ಯುಕ್ತ ಪ್ರಾಧಿಕಾರಗಳು ಆದೇಶವನ್ನು ಮಾಡಿದ್ದರೆ, ಅದಕ್ಕೆ ಪಾವತಿಸಬೇಕಾದ ಸ್ಟ್ಯಾಂಪು ಸುಂಕದ ಗರಿಷ್ಟ ಮಿತಿಯನ್ನು ನಿಗದಿಪಡಿಸಲು ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಅಂದಾಜು 20 ರಿಂದ 30 ಕೋಟಿ ರೂಪಾಯಿಗಳ ಹಣಕಾಸು ಕೊರತೆಯನ್ನು ಒಳಗೊಂಡಿರುತ್ತದೆ.

**ಆರ್. ಅಶೋಕ್**
ಕಂದಾಯ ಸಚಿವರು

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಸಭೆ

**ಅನುಬಂಧ**

**ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ**

**(1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ**

**Xxx xxx xxx**

**ಅನುಸೂಚಿ**

**Xxx xxx xxx**

| | |
|---|---|
| **20. (1) ಹಸ್ತಾಂತರಣ ಪತ್ರ.-** 2ನೇ ಪ್ರಕರಣದ (ಡಿ) ಖಂಡದ ಮೂಲಕ ಪರಿಭಾಷಿಸಿದಂತೆ ಸಂ.52ರ ಅಡಿಯಲ್ಲಿ ವಿಧಿಸಲಾದ ಅಥವಾ ವಿನಾಯಿತಿಗೊಳಿಸಲಾದ ವರ್ಗಾವಣೆಯಾಗಿರದ, ಹಸ್ತಾಂ- ತರಣವು ಯಾವ ಸ್ವತ್ತಿನ ಮಾರುಕಟ್ಟೆ ಮೌಲ್ಯವು ಹಸ್ತಾಂತರಣದ ವಸ್ತು ವಿಷಯವಾಗಿದೆಯೋ ಆ ಸ್ವತ್ತು ಈ ಕೆಳಗೆ ನಮೂದಿಸಿದವುಗಳ ಪರಿಮಿತಿ ಯೊಳಗೆ ಇದ್ದರೆ.- | ಮೌಲ್ಯದ ಶೇಕಡಾ ಐದರಷ್ಟು |
| (2) ಕರ್ನಾಟಕ ಫ್ಲಾಟುಗಳ ಒಡೆತನ (ನಿರ್ಮಾಣ, ಮಾರಾಟ ವ್ಯವಸ್ಥಾಪನೆ ಮತ್ತು ವರ್ಗಾವಣೆ ಸಂವರ್ಧನೆಯ ನಿಯಂತ್ರಣ) ಅಧಿನಿಯಮ, 1972ರ (1993ರ ಕರ್ನಾಟಕ ಅಧಿನಿಯಮ, 16) 2ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಲಾದಂತೆ 'ಪ್ಲಾಟ್' ನ ಆವರಣಕ್ಕೆ ಸಂಬಂಧಪಟ್ಟಂತೆ (2ಎ) ಖಂಡದಲ್ಲಿ ಉಲ್ಲೇಖಿಸಿದ ಪ್ಲಾಟ್‌ನ ಆವರಣಗಳನ್ನು ಹೊರತುಪಡಿಸಿ ಅಥವಾ ಕರ್ನಾಟಕ ಅಪಾರ್ಟ್‌ಮೆಂಟ್ ಒಡೆತನ ಅಧಿನಿಯಮ, 1972ರ (1973ರ ಕರ್ನಾಟಕ ಅಧಿನಿಯಮ, 17) 3ನೇ ಪ್ರಕರಣದ (ಎ) ಖಂಡದಲ್ಲಿ ಪರಿಭಾಷಿಸಲಾದಂತೆ 'ಅಪಾರ್ಟ್‌ಮೆಂಟ್' ನ ಆವರಣಕ್ಕೆ ಸಂಬಂಧಪಟ್ಟಂತೆ ಸಹಕಾರ ಸಂಘದಿಂದ ಅಥವಾ ಅದರ ಪರವಾಗಿ ಷೇರಿನ ವರ್ಗಾವಣೆಗೆ ಯಾವುದೇ ಹೆಸರಿನಿಂದ ಕರೆಯಲಾಗುವ ಒಬ್ಬ ಪ್ರವರ್ತಕ, ಭೂಮಾಲೀಕ ಅಥವಾ ಅಭಿವೃದ್ಧಿಕಾರನು ನಿರ್ವಹಿಸಿದ ಹಸ್ತಾಂ-ತರಣದ ಮೊದಲ ಲಿಖಿತಕ್ಕೆ ಸಂಬಂಧಪಟ್ಟರೆ, ಸ್ವತ್ತಿನ ಮಾರುಕಟ್ಟೆ ಮೌಲ್ಯವು ಹಸ್ತಾಂತರಣದ ವಿಷಯ ವಸ್ತುವಾಗಿರುತ್ತದೆ.<br><br>**ವಿವರಣೆ.-** (ಎ) "ಆವರಣಗಳು" ಎಂದರೆ, ಭೂಮಿ, ಕಟ್ಟಡಗಳಲ್ಲಿನ ವಿಭಜಿಸಲಾಗದ ಹಿತಾಸಕ್ತಿ ಮತ್ತು ಸಾಮಾನ್ಯ ಪ್ರದೇಶದಲ್ಲಿನ ಪ್ರಮಾಣುಸಾರ ಪಾಲು ಇವುಗಳನ್ನು ಒಳಗೊಳ್ಳುತ್ತದೆ.<br><br>(ಬಿ) "ಘಟಕ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿನ ಕಟ್ಟಡದ ಯೋಜನೆಯ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಯೋಜನೆಗನುಸಾರವಾಗಿ ನಿರ್ಮಾಣ ಮಾಡಲಾದ ಅಥವಾ ನಿರ್ಮಾಣದಡಿ ಯಲ್ಲಿರುವ ಎಂಬ ಯಾವುದೇ ಹೆಸರಿನಿಂದ ಕರೆಯುವ ಪ್ಲಾಟ್ಸ್, ಅಪಾರ್ಟ್‌ಮೆಂಟ್, | ನಿರ್ಮಾಣದ ಹಂತವನ್ನು ಗಣನೆಗೆ ತೆಗೆದುಕೊಳ್ಳದೆ, ಅವುಗಳನ್ನು ಪೂರ್ಣ ನಿರ್ಮಿತ ಎಂದು ಭಾವಿಸಿ, ಪೂರ್ಣ ನಿರ್ಮಾಣಗೊಂಡ ಪ್ಲಾಟ್‌ಗಳು ಅಥವಾ ಅಪಾರ್ಟ್‌ಮೆಂಟ್‌ಗಳು ಅಥವಾ ಘಟಕದ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯದ ಮೇಲೆ 20 (1)ನೇ ಅನುಚ್ಛೇದಡಿಯಲ್ಲಿ ಹಸ್ತಾಂತರಣವಾದಂತೆ ಅದೇ ಶುಲ್ಕ |

| | |
|---|---|
| ವಠಾರ ವಿಭಾಗ (ಟೆನಿಮೆಂಟ್ ಬ್ಲಾಕ್) ಅಥವಾ ಯಾವುದೇ ಇತರ ಘಟಕ.<br><br>(ಸಿ) xxx | |
| (2ಎ) ಪ್ಲಾಟ್ ಅಥವಾ ಅಪಾರ್ಟ್‌ಮೆಂಟಿನ ಮೊದಲ ಮಾರಾಟಕ್ಕೆ ಸಂಬಂಧಿಸಿದ ಹಸ್ತಾಂತರ ಲಿಖಿತವಿದ್ದಲ್ಲಿ, ಮತ್ತು,- | ಮೌಲ್ಯದ ಶೇಕಡಾ ಎರಡರಷ್ಟು |
| (i) ಮಾರುಕಟ್ಟೆ ಮೌಲ್ಯವು ಇಪ್ಪತ್ತು ಲಕ್ಷಗಳು ಅಥವಾ ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದಲ್ಲಿ, | ಮೌಲ್ಯದ ಶೇಕಡಾ ಮೂರರಷ್ಟು][22] |
| (ii) ಮಾರುಕಟ್ಟೆ ಮೌಲ್ಯವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿದ್ದು, ಆದರೆ ಮೂವತ್ತೈದು ಲಕ್ಷ ರೂಪಾಯಿಗಳ ವರೆಗೆ ಮತ್ತು ಅದನ್ನು ಒಳಗೊಂಡು ಇದ್ದಲ್ಲಿ | |
| (3) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 12) ಅಡಿಯಲ್ಲಿ ರಚಿತವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಕರ್ನಾಟಕ ಗೃಹ ಮಂಡಲಿ ಅಧಿನಿಯಮ, 1962ರ (1963ರ ಕರ್ನಾಟಕ ಅಧಿನಿಯಮ 10) ಅಡಿಯಲ್ಲಿ ರಚಿತವಾದ ಕರ್ನಾಟಕ ಗೃಹ ನಿರ್ಮಾಣ ಮಂಡಲಿಯು ಪ್ಲಾಟಿನ ಅಥವಾ ಅಪಾರ್ಟ್‌ಮೆಂಟಿನ ಆವರಣಗಳಿಗೆ ಸಂಬಂಧಿಸಿದಂತೆ ಯಾವುದೇ ಹಸ್ತಾಂ-ತರಣ ಪತ್ರದ ಲಿಖಿತವನ್ನು ಬರೆದುಕೊಟ್ಟದ್ದಲ್ಲಿ. | ಸುಂಕವನ್ನು, ಲಿಖಿತದಲ್ಲಿ ನಮೂದಿಸಲಾದಂತೆ, ಪ್ರತಿಫಲದ ಮೊಬಲಗು ಅಥವಾ ಮೌಲ್ಯದ ಮೇಲೆ ಅನುಚ್ಛೇದ 20ರ (2)ನೇ ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಸಂದಾಯ ಮಾಡತಕ್ಕದ್ದು:<br><br>ಪರಂತು, ಒಂದು ಗೇಣಿ ಹಾಗೂ ಮಾರಾಟ ಒಪ್ಪಂದವನ್ನು ಬರೆದುಕೊಡಲಾದ ಯಾವುದೇ ಸಂದರ್ಭದಲ್ಲಿ ಮತ್ತು 5ನೇ ಅನುಚ್ಛೇದದ (ಡಿಎ) ಬಾಬಿನ ಅಡಿಯಲ್ಲಿ ಅಂಥ ಒಪ್ಪಂದಗಳಿಗಾಗಿ ಅಗತ್ಯಪಡಿಸಲಾದ ಮೌಲ್ಯಾನುಸಾರ ಸ್ಟಾಂಪು ಹಾಕಲಾಗಿದ್ದಲ್ಲಿ ಮತ್ತು ಅಂಥ ಒಪ್ಪಂದದ ಅನುಸರಣೆಯಲ್ಲಿ ಒಂದು ಹಸ್ತಾಂತರಣ ಪತ್ರವನ್ನು ತರುವಾಯ ಬರೆದು ಕೊಡಲಾದರೆ, ಅಂಥ ಹಸ್ತಾಂತರಣ ಪತ್ರದ ಮೇಲಿನ ಸುಂಕವು ಐವತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ ಅಥವಾ ಹಸ್ತಾಂತರಣ ಪತ್ರದ ಮೇಲೆ ಸಂದಾಯವಾಗುವ ಸುಂಕದ ವ್ಯತ್ಯಾಸ ಮತ್ತು 5ನೇ ಅನುಚ್ಛೇದದ (ಡಿಎ) ಬಾಬಿನ ಅಡಿಯಲ್ಲಿ ಭದ್ರತಾ ಠೇವಣಿಗೆಗಾಗಿ ಈಗಾಗಲೇ ಸಂಗ್ರಹಿಸಲಾದ ಸುಂಕ ಇವರೆಡರಲ್ಲಿ ಯಾವುದು ಅಧಿಕವೋ ಅದನ್ನು ಮೀರತಕ್ಕದ್ದಲ್ಲ. |
| (4) ಕಂಪನಿಗಳ ಅಧಿನಿಯಮ, 2013ರ ಅಡಿಯಲ್ಲಿ ಸೂಕ್ತ ನ್ಯಾಯಾಧಿಕಾರಣಗಳು ಅಥವಾ ಪ್ರಾಧಿಕಾರಗಳ ಅಡಿಯಲ್ಲಿ][21] ಅಥವಾ ಉಚ್ಚನ್ಯಾಯಾಲಯವು ಮಾಡಿದ ಒಂದು ಅದೇಶಕ್ಕೆ ಸಂಬಂಧಪಟ್ಟಿದ್ದರೆ. | ಕರ್ನಾಟಕ ರಾಜ್ಯದಲ್ಲಿರುವ ಮತ್ತು ವರ್ಗಾವಣೆ ಪಡೆದ ಕಂಪನಿಗೆ ವರ್ಗಾಯಿಸಲಾದ ವರ್ಗಾವಣೆ ಮಾಡುವ ಕಂಪನಿಯ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡಾ ಮೂರರಷ್ಟು; ಅಥವಾ |
| (i) ಮಾತೃ ಕಂಪನಿಯೊಂದಿಗೆ ಪೂರಕ ವಿಲೀನವನ್ನೂ ಒಳಗೊಂಡಂತೆ ಕಂಪನಿಗಳ ವಿಲೀನದ ಸಂಬಂಧದಲ್ಲಿ, | ವಿನಿಮಯದಲ್ಲಿ ಅಥವಾ ಅನ್ಯಥಾ ನೀಡಿದ ಅಥವಾ ಹಂಚಿಕೆ ಮಾಡಿದ ಷೇರುಗಳ ಒಟ್ಟಾರೆ ಮೌಲ್ಯದ ಶೇಕಡ ಒಂದಕ್ಕೆ ಸಮನಾದ ಮೊಬಲಗು ಮತ್ತು ಪೂರಕ ಕಂಪನಿಯ ಸಂದರ್ಭದಲ್ಲಿ |

| | |
|---|---|
| | ಷೇರುಗಳು ಮಾತ್ರ ಕಂಪನಿಯೊಂದಿಗೆ ವಿಲೀನಗೊಂಡಿದ್ದರೆ (ಅಥವಾ ರದ್ದಾಗಿದ್ದರೆ) ಮತ್ತು ಅದರ ಜೊತೆಗೆ ಇಂಥ ವಿಲೀನಕ್ಕೆ ಪರಿಗಣನೆಯಲ್ಲಿರುವ ಮೊಬಲಗು ಇವೆರಡರಲ್ಲಿ ಯಾವುದು ಹೆಚ್ಚೋ ಅದನ್ನು ಸಂದಾಯ ಮಾಡುವುದು. |
| (ii)ಕಂಪನಿಯ ಪುನರ್ ನಿರ್ಮಾಣ ಅಥವಾ ಡಿಮರ್ಜರ್‌ನ ಸಂಬಂಧದಲ್ಲಿ,- | ಕರ್ನಾಟಕ ರಾಜ್ಯದಲ್ಲಿರುವ ಮತ್ತು ವರ್ಗಾವಣೆ ಪಡೆದ, ಕಂಪನಿಗೆ ವರ್ಗಾಯಿಸಲಾದ ವರ್ಗಾವಣೆ ಮಾಡುವ ಕಂಪನಿಯು ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡಾ ಮೂರರಷ್ಟು ಅಥವಾ ರಿಸಲ್ಟಿಂಗ್ ಕಂಪನಿಗೆ ವಿತರಿಸಿದ ಅಥವಾ ಹಂಚಿಕೆ ಮಾಡಿದ ಷೇರುಗಳ ಒಟ್ಟು ಮೌಲ್ಯದ ಶೇಕಡ ಒಂದಕ್ಕೆ ಸಮನಾದ ಮೊಬಲಗು ಮತ್ತು ಇದರ ಜೊತೆಗೆ, ಅಂಥ ಡಿಮರ್ಜರ್ ಅಥವಾ ಪುನರ್ ನಿರ್ಮಾಣಕ್ಕೆ ಸಂದಾಯ ಮಾಡಿದ್ದಲ್ಲಿ ಪರಿಗಣನೆಯಲ್ಲಿರುವ ಮೊಬಲಗು,<br><br>ಇವೆರಡರಲ್ಲಿ ಯಾವುದು ಹೆಚ್ಚೋ ಅದು.<br><br>**ವಿವರಣೆ.-** ಅನುಚ್ಛೇದ 20 (4)ರ ಉದ್ದೇಶಕ್ಕಾಗಿನ "ಷೇರುಗಳ ಒಟ್ಟಾರೆ ಮೌಲ್ಯ" ಎಂದರೆ ಷೇರುಗಳ ಮುಖ ಬೆಲೆ ಅಥವಾ ಮಾರುಕಟ್ಟೆ ಮೌಲ್ಯ, ಯಾವುದು ಹೆಚ್ಚೋ ಅದು. |
| **ವಿನಾಯಿತಿ.-** ಕೈಗಾರಿಕಾ ಹಣಕಾಸು ಮತ್ತು ಪುನರ್ ರಚನೆ ಮಂಡಲಿಯ (ಬಿ.ಐ.ಎಫ್.ಆರ್) ಆದೇಶಗಳ ಅಡಿಯಲ್ಲಿ ಇತರ ಕಂಪನಿಗಳೊಡನೆ ರೋಗಗ್ರಸ್ತ ಕಂಪನಿಗಳ ವಿಲೀನದ ಸಂದರ್ಭದಲ್ಲಿ | |

**Xxx xxx xxx**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 15ನೇ ಫೆಬ್ರವರಿ 2021

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**TWELFTH SESSION**

# THE KARNATAKA STAMP (SECOND AMENDMENT) BILL, 2022

**(LA Bill No. 03 of 2022)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the Seventy third year of the Republic of India as follows:-

**1. Short title and commencement**.– (1) This Act may be called the Karnataka Stamp (Second Amendment) Act, 2022.

(2) It shall come into force at once.

**2. Amendment of schedule.-** In the Karnataka Stamp Act, 1957, (Karnataka Act 34 of 1957) in schedule, in article 20, in clause (4),-

(i) in sub-clause (i), in column (3), at the end, after the words “whichever is higher” the words "subject to a maximum of rupees twenty five crores” shall be inserted; and

(ii) in sub-clause (ii), in column (3), before explanation, after the words “ whichever is higher” the words “ subject to a maximum of rupees twenty five crores” shall be inserted.

## STATEMENT OF OBJECTS AND REASONS

It is considered necessary further to amend the Karnataka Stamp Act, 1957 (Karnataka Act 34 of 1957) to fix an upper limit on the Stamp duty to be paid if an order is made by the High Court or appropriate Tribunals or appropriate Authorities under the Companies Act, 2013 (Central Act 18 of 2013) in respect of amalgamation of companies including a subsidiary amalgamating with parent company, reconstruction or demerger of a company in order to provide relief to such a company.

Hence the Bill.

## FINANCIAL MEMORANDUM

It would involve approximate financial forego of rupees 20 to 30 crores per year by the proposed Legislative measure.

**R. ASHOKA**
Minister for Revenue

**M.K. VISHALAKSHI**
Secretary (I/c)
Karnataka Legislative Assembly

**ANNEXURE**

**EXTRACT FROM THE KARNATAKA STAMP ACT, 1957**

**(Karnataka Act 34 of 1957)**

**XXX XXX XXX**

**SCHEDULE**

**XXX XXX XXX**

| | |
|---|---|
| **20 (1) For Conveyance.-** as defined by clause (d) of section 2, not being a transfer charged or exempted under No.52, on the market value of the property which is the subject matter of conveyance. | five percent of the value |
| (2)Where it relates to instrument of conveyance executed by a promoter, a land owner, or a developer by whatever name called, pertaining to premises of 'Flat' as defined in clause (a) of section 2 of the Karnataka Ownership Flats (Regulation of the Promotion of Construction, Sale, Management and Transfer) Act, 1972 (Karnataka Act 16 of 1973) or 'Apartment' as defined in clause (a) of section 3 of the Karnataka Apartment Ownership Act, 1972 (Karnataka Act 17 of 1973) or transfer of share by or in favour of Co-operative Society or Company pertaining to premises or Unit and the market value of the property which is the subject matter of conveyance. | the same duty as a conveyance under Article 20(1) on the market value equal to the market value of the fully constructed flat or apartment or unit, irrespective of the stage of construction, deeming it as fully constructed |

**Explanation:—**

(a) “Premises” means and includes undivided interest in the land, building and proportionate share in the common areas:

(b) “Unit” includes flat, apartment, tenement, block or anyother unit by whatever name called, constructed or under construction in accordance with the sanctioned plan by the authority competent to sanction a building plan under any law for the time being in force:

(c) xxxxxx

| | |
|---|---|
| (2A) where an instrument of conveyance relating to the first sale of flat or apartment, and,- | |
| (i) where the market value of which is rupees twenty lakhs or less than twenty lakhs. | two percent of the value |
| (ii) (ii) where the market value of which is above rupees twenty lakhs but upto and inclusive of thirty five lakhs. | three percent of the value |

| | |
|---|---|
| (3) Where any instrument of conveyance rates is effected by the Bangalore Development Authority constituted under Bangalore Development Authority Act, 1976 (Karnataka Act 12 of 1976), the Karnataka Housing Board constituted under the Karnataka Housing Board Act, 1962 (Karnataka Act 10 of 1963) pertaining to premises of Flat or Apartment. | The duty shall payble at the specified under clause (2) of Article 20 on the amount or value of consideration as set forth in the instrument:<br>Provided that, in any case where a lease-cum-sale Agreement is executed and is stamped with the advalorem duty required for such agreement under item (da)of Article 5 and in furtherance of such agreement a conveyance is subsequently executed, the duty on such conveyance shall not exceed rupees fifty or the difference of the duty payable on such conveyance and the duty already collected on the security deposit under item (da) of Article 5, whichever is greater. |

| | |
|---|---|
| (4) If relating to an order made by the High Court "or appropriate Tribunals or appropriate Authorities under the Companies Act, 2013", in respect of; | Three percent on the market value of the property of the transferor company, located within the State of Karnataka and transferred to the transferee company;or |
| (i) Amalgamation of companies, including a subsidiary amalgamating with parent company | An amount equal to one percent of the aggregate value of shares issued or allotted in exchange, or otherwise and in case of subsidiary company, shares merged (or cancelled) with parent company and in addition, the amount of consideration if any, paid for such amalgamation; whichever is higher. |
| (ii) Reconstruction or Demerger of a company | Three percent on the market value of the property of the transferor company, located within the State of Karnataka, and transferred to the resulting company; or<br>An amount equal to one percent of the aggregate value of shares issued or allotted to the resulting company and in addition, the amount of consideration if any, paid for such demerger or reconstruction;<br>Whichever is higher.<br>**Explanation :-** The term, "aggregate value of shares" for the purpose of Article 20(4) means,the face value of shares or its market value, whichever is higher. |

**Exemption:-** Amalgamation of sick companies with others, under the orders of Board of Industrial Finance and Reconstruction (BIFR)

**XXX XXX XXX**

Govt. Press, Vikasa Soudha, Bengaluru, 15th February, 2022, P7, W.D. , Copies 500